(d) if so, the action taken by the Government in this regard ?

SRI B. RACHAIAH (Minister for Education).—

(a) 19
(b) 4
(c) & (d) Yes.

Only those societies which are capable have been given permission to run institutions.

PAPERS LAID ON THE TABLE

SRI A. LAKSHMISAGAR (Minister for Law and Parliamentary, Housing and Public Grievances).—On behalf of the Chief Minister, I beg to lay on the table of the House :

"Report of the Byadgi Commission of Inquiry appointed to inquire into the Police Firings at Bellary together with a memorandum af action taken there ;

as required under sub-sectian (4) of Section 3 of the Commission of Inquiry Act, 1952."

SRI VISWANATH REDDY (Minister for Animal Husbandry, Veterinary Services and Horticulture),—I beg to lay :

"Eighth Annual Reports and Account of the Bangalore Animal Food Corporation Limited, for the year ended 31st March, 1982 ;

as required under sub-section (3) of Section 619A of the Companies Act, 1956."

ನಿಯಮ ೩೩೪ರ ಮೇರೆಗೆ

(i) ಇಂಟರ್ ನ್ಯಾಷನಲ್ ಇನ್ಸ್‌ಟ್ರುಮೆಂಟ್ಸ್‌ನವರು ಲಾಕೌಟ್‌ನ್ನು ಡಿಕ್ಲೇರ್ ಮಾಡಿರುವ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮುಖ್ಯವಾದಂಥ ವಿಷಯವೇನೆಂದರೆ ನಮ್ಮ ಇಂಟರ್‌ನ್ಯಾಷನಲ್ ಇನ್ಸ್‌ಟ್ರುಮೆಂಟ್ಸ್ ಕಂಪನಿ ವಿಷಯದಲ್ಲಿ ಒಂದು ಸಾರಿ ಮಾತನಾಡಿದ್ದಾರೆ. ಸುಮಾರು ೧೫೦೦ ಜನ ಕಾರ್ಮಿಕರು ಇವತ್ತು ಬೀದಿಪಾಲಾಗಿದ್ದಾರೆ. ಮಾಲೀಕರೇ ಲಾಕೌಟ್ ಮಾಡಿದ್ದಾರೆ. ಕಳೆದ ೧೫–೨೦ ವರ್ಷದಿಂದ ಕಂಪನಿ ಚೆನ್ನಾಗಿ ನಡೆದುಕೊಂಡು ಬರುತ್ತಿದೆ. ಕಾರ್ಮಿಕರ ಮೇಲೆ ಇಲ್ಲದ ಅಪವಾದವನ್ನು ಹೊರಿಸಿ ; ಲಾಕೌಟ್ ಮಾಡಿದ್ದಾರೆ. ಕಾರ್ಮಿಕರ ಜೊತೆ ಚರ್ಚೆ ಮಾಡುತ್ತಿರುವಾಗಲೊ ಫ್ಯಾಕ್ಟರಿಯನ್ನು ಬಂದ್ ಮಾಡಿದ್ದಾರೆ. ಕಾಯಿದೆ ಪ್ರಕಾರ ಸರ್ಕಾರವನ್ನು ಕೇಳಬೇಕಾಗಿದ್ದರೂ ಅವರು ಕೇಳಿಲ್ಲ. ಅಲ್ಲಿನ ಕೆಲಸಗಾರರು ಮಂತ್ರಿಗಳ ಹತ್ತಿರ ಮೆರವಣಿಗೆ ಬಂದು ಮಾತನಾಡಿದ್ದಾರೆ.

ಆದರೆ ಇದುವರೆಗೂ ಪ್ರಶ್ನೆ ಇತ್ಯರ್ಥವಾಗಿಲ್ಲ. ಸ್ವಾಮಿ, ೧೫೦೦ ರಲ್ಲಿ ೩೦೦ ಜನ ಹೆಣ್ಣು ಮಕ್ಕಳಿದ್ದಾರೆ, ಅವರೆಲ್ಲಾ ಇವತ್ತಿನ ದಿವಸ ಬೀದಿ ಪಾಲಾಗಿದ್ದಾರೆ. ಬರೀ ಕನ್‌ಸಿಲಿಯೇಷನ್ ಲೆವಲ್‌ನಲ್ಲಿ ಮೀಟಿಂಗ್ ಮಾಡಿದರೆ ಲೇಬರ್ ಡಿಪಾರ್ಟ್‌ಮೆಂಟಿನವರ ಕನ್‌ಸಿಲಿಯೇಷನ್‌ಗೆ ಮುಖ್ಯ ಸ್ಥರು ಯಾರು ಬರುವುದಿಲ್ಲ, ಆದುದರಿಂದ ಮೇಲ್ಮಟ್ಟದ ಅಧಿಕಾರಿಗಳನ್ನು ಮತ್ತು ಸಂಬಂಧಪಟ್ಟವರೆಲ್ಲರನ್ನು ಕರೆಸಿ ಮಂತ್ರಿಗಳವರ ಲೆವಲ್‌ನಲ್ಲಿ ಮಿಾಟಿಂಗ್ ಮಾಡಿ ಇದನ್ನು ಇತ್ಯರ್ಥ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್. (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಆಯಿತು ಅದೇ ರೀತಿಯಾಗಿ ಕರೆದು ಮಾತನಾಡುತ್ತೇನೆ.

(ii) ಬೆಳಗಾಂನ ಏಳು ವರ್ಷದ ಬಾಲಕ ಪ್ರಸಾದ ಬಾಬು ಬಿನ್ ಶ್ರೀ ಸದಾನಂದ ಪ್ರಭು ತಪ್ಪಿಸಿಕೊಂಡಿರುವ ಬಗ್ಗೆ

ಶ್ರೀ ಆರ್.ಸಿ. ಬಾಳಿಕುಂದರಗಿ. (ಬೈಲಹೊಂಗಲ).—ಅಧ್ಯಕ್ಷರೇ, ಜನವರಿ ೩೧ ರಂದು ಬೆಳಗಾಂನಲ್ಲಿ ಸದಾನಂದ ಎನ್ನತಕ್ಕ ೭ ವರ್ಷದ ಮಗುವನ್ನು ಯಾರೋ ಎತ್ತುಕೊಂಡು ಹೋಗಿದ್ದಾರೆ. ಆನಂತರ ನಾಲ್ಕು ದಿವಸಗಳು ಕಳೆದ ನಂತರ ಆ ಹುಡುಗನ ಬ್ಯಾಗನ್ನು ಸ್ಕೂಲ್ ಹತ್ತಿರ ಇಟ್ಟು ಹೋಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳವರ ಹತ್ತಿರ ನಾನು ಸ್ವತಃ ಹೋಗಿ ಹೇಳಿದಾಗ ಪರಿಶೀಲನೆ ಮಾಡುತ್ತೇನೆಂದು ಹೇಳಿದರು. ಇದು ಪೋಲೀಸಿನವರ ವೈಫಲ್ಯತೆಯನ್ನು ತೋರಿಸುತ್ತಿದೆ ಆದುದರಿಂದ ಅಲ್ಲಿಗೆ ಸ್ಪೆಷಲ್ ಸ್ಕ್ವಾಡ್‌ನ್ನು ಹಾಕಿ ಆ ಬಾಲಕನನ್ನು ಪತ್ತೆ ಮಾಡಿಸಿ ಕೊಡುತ್ತೀರಾ ? ಎಂದು ಮುಖ್ಯ ಮಂತ್ರಿಗಳವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ. (ಮುಖ್ಯ ಮಂತ್ರಿಗಳವರು).—ಈ ವಿಷಯದ ಬಗ್ಗೆ ಮಾನ್ಯ ಸದಸ್ಯರು ಎರಡು ಸಲ ಭೆಟ್ಟಿಯಾಗಿದ್ದರು. ಆ ಹುಡುಗನ ಫೋಟೋ ಕೂಡ ಕೊಟ್ಟಿದ್ದಾರೆ. ಪೋಲೀಸಿನವರು ಸುತ್ತಮುತ್ತಲಿನ ಚಿಕ್ಕ ಮತ್ತು ದೊಡ್ಡ ದೊಡ್ಡ ಊರುಗಳಿಗೂ ಸಹ ಹೋಗಿ ನೋಡಿಕೊಂಡು ಬಂದಿದ್ದಾರೆ. ಗೋವಾ, ಗೋಕಾಕ್, ಮುಂತಾದ ಊರುಗಳಿಗೆಲ್ಲಾ ಹೋಗಿ ನೋಡಿಕೊಂಡು ಬಂದಿದ್ದಾರೆ. ಆದರೆ ದುರ್ದೈವ ಇವತ್ತಿನವರೆಗೂ ಏನಾಯಿತು ಎಂಬುದು ಗೊತ್ತಾಗಲಿಲ್ಲ. ಪೋಲೀಸಿನವರು ಇದಕ್ಕಾಗಿ ತೀವ್ರವಾದ ಶೋಧ ನಡೆಸಿದ್ದಾರೆ. ಆದಷ್ಟು ಬೇಗ ಸುಳಿವು ಹತ್ತಬಹುದು ಎನ್ನತಕ್ಕ ನಿರೀಕ್ಷೆ ಇದೆ. ಒಬ್ಬ ಬಂದು ಆ ಹುಡುಗನಿಗೆ ನಿಮ್ಮ ತಂದೆಯವರು ಕರೆಯುತ್ತಿದ್ದಾರೆ ಬಾ ಎಂದು ಕರೆದುಕೊಂಡು ಹೋಗಿದ್ದಾರೆಂದು ತಿಳಿದು ಬಂದಿದೆ. ಅವರಲ್ಲಿ ಪರಸ್ಪರ ವೈರತ್ವ ಇತ್ತೋ ಅಥವಾ ಬೇರೆ ಯಾವ ಕಾರಣದಿಂದ ಈ ರೀತಿಯಾಗಿ ಮಾಡಿದ್ದಾರೋ ಗೊತ್ತಾಗಲಿಲ್ಲ. ಪೋಲೀಸಿನವರು ಬಹಳ ತೀವ್ರವಾಗಿ ಶೋಧ ನಡೆಸಿದ್ದಾರೆ. ಆದಷ್ಟು ಬೇಗ ಹುಡುಕಬಹುದು ಎನ್ನತಕ್ಕ ಆಸೆ ಇದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೆ, ನಾನು ಇದರ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ. ಆ ಹುಡುಗನ ತಂದೆಗೆ ಯಾರೋ ಫೋನ್ ಮಾಡಿದ್ದರಂತೆ ಆ ವಿಚಾರವನ್ನು ಕೂಡ ಪೋಲೀಸ್ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಪೋಲೀಸಿನವರು ಆ ಹುಡುಗನನ್ನು ಹಿಡಿಯುವುದರಲ್ಲಿ ನಿರ್ಲಕ್ಷ್ಯವಾಡಿದ್ದಾರೆ ಎಂದು ನಾನು ಆಪಾದನೆ ಮಾಡುವುದಕ್ಕೆ ಹೋಗುತ್ತಿಲ್ಲ. ಆ ಹುಡುಗನಿಗೆ ಏನು ಮಾಡುತ್ತಾರೋ ಎಂಬುದು ಗೊತ್ತಿಲ್ಲ ಆದುದರಿಂದ ತಾವು ಅಲ್ಲಿಗೆ ಒಬ್ಬರು ದಕ್ಷ ಅಧಿಕಾರಿಯನ್ನು ಕಳುಹಿಸಿ ಆದಷ್ಟು ಬೇಗ ಪತ್ತೆ ಹಚ್ಚುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಟೆಲಿಫೋನ್ ವಿಚಾರವನ್ನು ಮಾನ್ಯ ಶ್ರೀ ವೀರಪ್ಪ ಮೊಯ್ಲಿಯವರು ಹೇಳಿದರು. ಅದು ಬಂದದ್ದು ನಿಜ. ಈ ಕಾರ್ಯಕ್ಕಾಗಿಯೇ ಒಬ್ಬ ಸ್ಪೆಷಲ್ ಸಬ್ ಇನ್ಸ್‌ಪೆಕ್ಟರ್ ರವರನ್ನು ನೇಮಿಸಿದ್ದೇವೆ. ಅವರು ಮಹಾರಾಷ್ಟ್ರ, ಗೋವಾ ಮತ್ತು ಪುನಾದ ಪೋಲೀಸ್ ಅಧಿಕಾರಿಗಳೊಂದಿಗೆ ಸಂಪರ್ಕವನ್ನಿಟ್ಟುಕೊಂಡು ಪತ್ತೆ ಕಾರ್ಯವನ್ನು ಮಾಡುತ್ತಿದ್ದಾರೆ. ಈ ರೀತಿಯಾದ ಪ್ರಯತ್ನ ನಡೆದಿದೆ.